# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.49, ಲಿಂಗರಾಜಪುರ ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಲಿಂಗರಾಜಪುರ ವಾರ್ಡ್ ಕಛೇರಿಯ ಕಟ್ಟಡದಲ್ಲಿ ದಿನಾಂಕ: 15-10-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ಸದಸ್ಯರು,

1) ಶ್ರೀ ಅಜ್ಮಲ್ ಆರೀಫ್, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,

2) ಶ್ರೀ ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,

3) ಶ್ರೀ ವೆಂಕಟೇಶ್, ವೈದ್ಯಾಧಿಕಾರಿಗಳು, ಲಿಂಗರಾಜಪುರ

4) ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ,

5) ಶ್ರೀ ಜಯಶೀಲನ್, ಸ್ಥಳೀಯರು, ಲಿಂಗರಾಜಪುರ,

6) ಶ್ರೀ ಉಮೇಶ್.ಆರ್, ಸ್ಥಳೀಯರು, ಲಿಂಗರಾಜಪುರ,

7) ಶ್ರೀ ಸೂರ್ಯನಾರಾಯಣ, ಸ್ಥಳೀಯರು, ಲಿಂಗರಾಜಪುರ,

ಹಾಜರಿದ್ದ ಅಧಿಕಾರಿಗಳು

1) ಶ್ರೀ ವಿಜಯ್, ಕಿರಿಯ ಆರೋಗ್ಯ ನಿರೀಕ್ಷಕರು.

2) ಕು॥ ರಜನಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು

3) ಕು॥ ಪೂಜಾ.ಎಂ, ಸಹಾಯಕ ಅಭಿಯಂತರರು, ಲಿಂಗರಾಜಪುರ

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

1) **ಘನತ್ಯಾಜ್ಯ ನಿರ್ವಹಣೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

2) **ಬೀದಿ ದೀಪಗಳ ನಿರ್ವಹಣೆ:-**

- ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಕನಕದಾಸ ಬಡಾವಣೆ ಹಾಗೂ ಮುನಿತಾಯಪ್ಪ ಬಡಾವಣೆಯಲ್ಲಿ 05 ಬೀದಿದೀಪಗಳು ಉರಿಯುತ್ತಿರುವುದಿಲ್ಲ ಎಂದು ಸಭೆಗೆ ತಿಳಿಸಿದಾಗ, ಈ ಬಗ್ಗೆ ಚರ್ಚಿಸಿ, ಕೂಡಲೇ ಸರಿಪಡಿಸಲು ಸಂಬಂಧಪಟ್ಟವರಿಗೆ ಸಭೆಯು ಆದೇಶಿಸಿತು.

3) **ಬೃಹತ್ ನೀರುಗಾಲುವೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

4) **ಆರೋಗ್ಯ ಇಲಾಖೆ:-**

- ಶ್ರೀ ವೆಂಕಟೇಶ ಆರೋಗ್ಯಾಧಿಕಾರಿ ರವರು ಮಾತನಾಡಿ, ಪ್ರಸ್ತುತ ಲಿಂಗರಾಜಪುರ ವಾರ್ಡ್ ಪ್ರದೇಶದಲ್ಲಿ ನಿರಂತರವಾಗಿ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿರುತ್ತದೆ ಮತ್ತು ಡೆಂಗ್ಯೂ ಲಕ್ಷಣಗಳು ಇರುವ ಕಡೆಗಳಲ್ಲಿ ಔಷಧಗಳನ್ನು ಸಿಂಪಡಿಸಲಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು. ಹಾಗೂ ಬೂಸ್ಟರ್ ಡೋಸ್‌ಗಳನ್ನು ನೀಡಲಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು.

5) **ಕಾಮಗಾರಿ ಇಲಾಖೆ:-**

- **ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ ರವರು ಮಾತನಾಡಿ** ವಾರ್ಡ್ ವ್ಯಾಪ್ತಿಯ ಸಾಕಮ್ಮ ಬಡಾವಣೆಯಲ್ಲಿ ಹಾಗೂ ಮುನಿತಾಯಪ್ಪ ಬಡಾವಣೆಯಲ್ಲಿ ತಲಾ ಒಂದು ಪಾಟ್‌ಹೋಲ್‌ಗಳಿರುವುದಾಗಿ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಅಭಿಯಂತರರು, ಕೂಡಲೇ ಪಾಟ್ ಹೋಲ್‌ಗಳನ್ನು ತುಂಬಲು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

6) **ಕಂದಾಯ ಇಲಾಖೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

7) **ಉದ್ಯಾನವನಗಳ ವಿಭಾಗ:-** ಯಾವುದೇ ಸಮಸ್ಯೆ ಇರುವುದಿಲ್ಲ.

8) **ಅರಣ್ಯ ವಿಭಾಗ:-** ಯಾವುದೇ ಸಮಸ್ಯೆ ಇರುವುದಿಲ್ಲ.

9) **ಪಶುಸಂಗೋಪನೆ ವಿಭಾಗ:-** ಯಾವುದೇ ಸಮಸ್ಯೆ ಇರುವುದಿಲ್ಲ.

10) **ನೀರು ಸರಬರಾಜು:-**

- **ಶ್ರೀ ಸೂರ್ಯನಾರಾಯಣ, ಸ್ಥಳೀಯರು ಲಿಂಗರಾಜಪುರ ರವರು ಮಾತನಾಡಿ,** ತಾಯಪ್ಪ ಬಡಾವಣೆ ಹಾಗೂ ವಿ.ಎಸ್.ಟಿ ರಸ್ತೆಯಲ್ಲಿ ನೀರು ಸರಬರಾಜು ಸಮರ್ಪವಾಗಿ ಮಾಡುತ್ತಿರುವುದಿಲ್ಲವೆಂದು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಬಿಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು, ಮಾತನಾಡಿ, ಕೂಡಲೇ ಸಮರ್ಪಕ ನೀರು ಸರಬರಾಜು ಮಾಡಲು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

11) **ಪೊಲೀಸ್/ಸಂಚಾರ ಮತ್ತು ಕಾನೂನು ಸುವ್ಯವಸ್ಥೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

12) **ಬೆಸ್ಕಾಂ ಇಲಾಖೆ :-**

- **ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ ರವರು ಮಾತನಾಡಿ** ವಾರ್ಡ್ ವ್ಯಾಪ್ತಿಯ ಹಲವು ಬಡಾವಣೆಗಳಲ್ಲಿ ಆಗಾಗ ಪವರ್ ಕಟ್ ಆಗುತ್ತಿರುತ್ತಿದೆ, ಇದರಿಂದ ಶಾಲಾ

ಮಕ್ಕಳಿಗೆ ಹಾಗೂ ಎಲ್ಲಾ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದಾಗ, ಮುಂದಿನ ಸಭೆಯಲ್ಲಿ ಬೆಸ್ಕಾಂ ಅಧಿಕಾರಿಗಳ ಸಮ್ಮುಖದಲ್ಲಿ ಕೂಲಂಕುಷವಾಗಿ ತೀರ್ಮಾನಿಸಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

ಮಾನ್ಯ ಅಧ್ಯಕ್ಷರು ಮಾತನಾಡಿ, ಲಿಂಗರಾಜಪುರ ಫ್ಲೈ ಓವರ್ ಹತ್ತಿರ ಇರುವ ರಾಜಕುಮಾರ್ ಅಂಡರ್ ಪಾಸ್ ದುಸ್ತಿತಿಯಲ್ಲಿದ್ದು, ಸಾರ್ವಜನಿಕರ ಹಾಗೂ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು, ಈ ಅಂಡರ್ ಪಾಸ್ ಬೃಹತ್ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗಕ್ಕೆ ಸಂಬಂಧಪಟ್ಟಿದ್ದು, ಕೂಡಲೇ ಸದರಿಯವರಿಗೆ ದುರಸ್ಥಿ ಪಡಿಸಲು ಕೋರಿ ಪತ್ರವನ್ನು ಬರೆಯಲು ಸಭೆಗೆ ತಿಳಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳನ್ನು ಕೂಡಲೇ ಅನುಷ್ಠಾನಕ್ಕೆ ತರಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.49, ಲಿಂಗರಾಜಪುರ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.49, ಲಿಂಗರಾಜಪುರ

**ಪ್ರತಿಯನ್ನು**

1) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.